# ಕಾಂತಾರ ವಸ್ತ್ರ ವಿಸ್ತಾರ

2022ರಲ್ಲಿ ತೆರೆಕಂಡಿದ್ದ 'ಕಾಂತಾರ' ಸಿನಿಮಾದ ಗೆಲುವು 'ಕಾಂತಾರ ಅಧ್ಯಾಯ 1'ರ ಕುರಿತು ಸಹಜವಾಗಿಯೇ ನಿರೀಕ್ಷೆಗಳು ಹೆಚ್ಚುವಂತೆ ಮಾಡಿದೆ. ಕರಾವಳಿಯ ಮಣ್ಣಿನ ಕಥೆಯನ್ನು ಕಟ್ಟಿಕೊಡುವಲ್ಲಿ, ಒಂದು ಕಾಲಘಟ್ಟವನ್ನು ಸೃಷ್ಟಿಸುವಲ್ಲಿ ದೃಶ್ಯಗಳೊಂದಿಗೆ, ವಸ್ತ್ರವಿನ್ಯಾಸದ ಪಾಲು ಬಹಳ ಮುಖ್ಯ. 'ಕಾಂತಾರ–1' ಸಿನಿಮಾದಲ್ಲಿ ವಸ್ತ್ರವಿನ್ಯಾಸದ ಜವಾಬ್ದಾರಿ ಹೊತ್ತಿರುವ ಪ್ರಗತಿ ಶೆಟ್ಟಿ, 'ಸುಧಾ'ದೊಂದಿಗೆ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ.

■ ಸುಮಲತಾ ಎನ್.



◆ 'ಕಾಂತಾರ ಅಧ್ಯಾಯ 1' ಸಿನಿಮಾದಲ್ಲಿ ವಸ್ತ್ರವಿನ್ಯಾಸ ಮಾಡಿದ ಅನುಭವ ಹೇಗಿತ್ತು?

ಈ ಸಿನಿಮಾ ನನ್ನ ಹೃದಯಕ್ಕೆ ಬಹಳ ಹತ್ತಿರವಾದದ್ದು. ಈ ಸಿನಿಮಾದಲ್ಲಿ ತೊಡಗಿಕೊಂಡಿದ್ದು ವಿಶ್ವವಿದ್ಯಾಲಯದಲ್ಲಿ ಕಲಿತಂತೆ ಅನ್ನಿಸಿತು. ವಿನ್ಯಾಸಗಳಿಗೆ ಬೇರೆ ಬೇರೆ ಕಡೆಗಳಿಂದ ವಸ್ತುಗಳನ್ನು ತರಿಸಿಕೊಂಡು ಕುಂದಾಪುರದಲ್ಲಿ ಬೇಸ್ ಮಾಡಿ ಉತ್ಪಾದನೆ ಮಾಡಿದ್ದು. ಸಿನಿಮಾದಲ್ಲಿ ಮುಖ್ಯ ತಾರಾಬಳಗ ಮಾತ್ರವಲ್ಲ, ಪ್ರತಿಯೊಬ್ಬರ ವಸ್ತ್ರವಿನ್ಯಾಸವನ್ನೂ ಅಳೆದು ತೂಗಿ, ಪರೀಕ್ಷಿಸಿ ಮಾಡಲಾಗಿದೆ. ಆಭರಣಗಳು, ವಸ್ತ್ರಗಳು, ಶಸ್ತ್ರಾಸ್ತ್ರಗಳಿಂದ ಹಿಡಿದು ಪಾದರಕ್ಷೆಗಳವರೆಗೂ ಎಲ್ಲದರ ವಿನ್ಯಾಸವನ್ನೂ ಖುದ್ದು ಪರೀಕ್ಷಿಸಿ ಮಾಡಲಾಗಿದೆ.

◆ ವಿನ್ಯಾಸಗಳ ಹಿಂದಿನ ಕಥೆ, ಸ್ಫೂರ್ತಿ?

ಸಿನಿಮಾ ಕಥೆ, ನಿರೂಪಣೆ ಕೇಳಿದ ನಂತರದ ಆರಂಭಿಕ ತಿಂಗಳುಗಳಲ್ಲಿ ಲುಕ್‌ಟೆಸ್ಟ್ ನಡೆಯಿತು. ಸಾವಿರಾರು ವರ್ಷಗಳ ಹಿಂದಿನ ಕಥೆಯನ್ನು ಹೇಳುತ್ತಿದ್ದುದರಿಂದ, ಬಹು ಸಮುದಾಯಗಳ ಪರಿಚಯದೊಂದಿಗೆ, ವಿಭಿನ್ನ ಹಂತಗಳಲ್ಲಿ ಕಥೆಯನ್ನು ತೆಗೆದುಕೊಂಡು ಹೋಗಬೇಕಾದ್ದರಿಂದ ಸಂಶೋಧನೆ ಅವಶ್ಯಕವಾಗಿತ್ತು. ಕೆಲವು ದೇವಸ್ಥಾನಗಳಿಗೆ ಹೋಗಿ ಅಲ್ಲಿನ ಶಿಲ್ಪಗಳು, ಶಾಸನಗಳಲ್ಲಿನ ಅಂಶಗಳನ್ನು ತಿಳಿದುಕೊಂಡೆವು. ರವಿವರ್ಮರಂಥ ಕಲಾವಿದರ ಪೇಂಟಿಂಗ್‌ಗಳನ್ನು ರೆಫರೆನ್ಸ್‌ನಲ್ಲಿಟ್ಟುಕೊಂಡೆವು. ಯಾವುದನ್ನೂ ಅನುಕರಿಸದೇ ನಮ್ಮದೇ ವಿನ್ಯಾಸಗಳನ್ನು ರೂಪಿಸಿದೆವು.

◆ ಈ ಹಿಂದೆ ಕೆಲವು ಸಿನಿಮಾಗಳಿಗೆ ವಸ್ತ್ರವಿನ್ಯಾಸ ಮಾಡಿದ್ದೀರಿ. ಈ ಸಿನಿಮಾದಲ್ಲಿ ನೀವು ಎದುರಿಸಿದ ಸವಾಲು?

ಕಾಂತಾರ, ಚಾರ್ಲಿ, ಬೆಲ್‌ಬಾಟಂ, ಕಥಾಸಂಗಮ ಸೇರಿ ಹಲವು ಸಿನಿಮಾಗಳಿಗೆ ವಸ್ತ್ರವಿನ್ಯಾಸ ಮಾಡಿದ್ದೇನೆ. ಈ ಸಿನಿಮಾ ದೊಡ್ಡ ಬಜೆಟ್‌ನದ್ದಾಗಿದ್ದು, ಹೆಚ್ಚು ಜವಾಬ್ದಾರಿಯುತವಾಗಿತ್ತು. ನಿರ್ದೇಶಕರ ಕಥಾ ನಿರೂಪಣೆಗೆ ತಕ್ಕಂತೆ ಲುಕ್ ಫಿಕ್ಸ್ ಮಾಡುವುದು ಇದೆಯಲ್ಲ, ಅದೇ ದೊಡ್ಡ ಸವಾಲಾಗಿತ್ತು. ಕಥೆ, ಕ್ಯಾರೆಕ್ಟರ್ ಗ್ರಾಫ್‌ಗಳನ್ನು ಅರ್ಥ ಮಾಡಿಕೊಂಡು ಕೆಲಸ ಮಾಡಬೇಕಿತ್ತು.

◆ 'ಕಾಂತಾರ– 1'ರ ಕುರಿತು ಜನರಲ್ಲಿ ನಿರೀಕ್ಷೆಗಳು ಹೆಚ್ಚಿವೆ. ಈ ನಿರೀಕ್ಷೆ ನಿಮ್ಮಲ್ಲಿ ತುಂಬಿದ ವಿಶ್ವಾಸ?

ನಿರೀಕ್ಷೆ ಹೆಚ್ಚಿದ್ದಾಗ ಜವಾಬ್ದಾರಿಯೂ ಹೆಚ್ಚಿರುತ್ತದೆ. ದೊಡ್ಡ ಬಜೆಟ್‌ನಲ್ಲಿ ಪ್ಯಾನ್ ಇಂಡಿಯಾ ಸಿನಿಮಾ ಮಾಡುವಾಗ ಜವಾಬ್ದಾರಿ, ಒತ್ತಡ ಇದ್ದೇ ಇರುತ್ತದೆ. ಸಿನಿಮಾ ಭಾಗವಾಗಿ ಬೇರೆ ಬೇರೆ ರಾಜ್ಯಗಳಿಂದ ನೂರಾರು ವಿನ್ಯಾಸಕರು ಬಂದರು. ಕಲಾವಿದರೂ ಸಾವಿರಾರು ಸಂಖ್ಯೆಯಲ್ಲಿದ್ದರು. ಒತ್ತಡ ಎನಿಸಿದರೂ ಸಂತೋಷದಿಂದ ಕೆಲಸ ಮಾಡಿದೆವು. ಜನರು ಹೇಗೆ ಈ ಸಿನಿಮಾ ಸ್ವೀಕರಿಸುತ್ತಾರೆ ಎಂಬುದರ ಬಗ್ಗೆ ಕುತೂಹಲ, ಭಯ, ಆತಂಕ ತುಂಬಿದೆ.

◆ ಸಿನಿಮಾ ಸೆಟ್‌ನಲ್ಲಿ ರಿಷಬ್ ಶೆಟ್ಟಿ ಅವರೊಂದಿಗೆ ಕೆಲಸ ಮಾಡಿದ ಅನುಭವ...

ರಿಷಬ್ ತುಂಬಾ ಪರ್ಫೆಕ್ಷನಿಸ್ಟ್. ಯಾವುದೇ ವಿಷಯದಲ್ಲಿ ಕಾಂಪ್ರಮೈಸ್ ಆಗುವುದಿಲ್ಲ. ನಾನೂ ಅದೇ ರೀತಿ ಕೆಲಸ ನಿರ್ವಹಿಸುವುದು. ಈ ಅನುಭವ ಮರೆಯಲಾರದ್ದು. ■